ಪಿ.ಡಬ್ಲ್ಯೂ-1

ದಿನಾಂಕ.04-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಪಾಟೀ ಸವಾಲುಃ** ಆರೋಪಿ ಪರ ಶ್ರೀ ಪಿ.ಎಸ್ ಎನ್ ವಕೀಲರಿಂದಃ

1. ನಾನು ಹೂವಿನ ವ್ಯಾಪಾರ ಮಾಡುತ್ತಿರುತ್ತೇನೆ. ಈ ವ್ಯಾಪಾರವನ್ನು ನಾನು ತುಂಬಾ ವರ್ಷ ಗಳಿಂದ ಮಾಡುತ್ತಿದ್ದೇನೆ. ಈ ವ್ಯಾಪಾರದಿಂದ ನನಗೆ ತಿಂಗಳಿಗೆ ರೂ 2,000/- ಆದಾಯ ಬರುತ್ತದೆ. ನಾನು ಬಿಪಿಎಲ್ ಕಾರ್ಡ ದಾರನಾಗಿರುತ್ತೇನೆ. ಬಿಪಿಎಲ್ ಕಾರ್ಡ ದಾರರಿಗೆ ವಾರ್ಷಿಕ ಉತ್ಪನ್ನ ರೂ 15000 ಗಿಂತ ಕಡಿಮೆ ಇದ್ದರೆ ಮಾತ್ರ ಕೊಡುತ್ತಾರೆ ಎಂದರೆ ಸರಿ. ಸದ್ರಿ ನೀವು ಹೇಳಿದಂತೆ ಆರೋಪಿಗೆ ನೀಡಲಾಯಿತು ಎಂದು ಹೇಳಿದ ಹಣವನ್ನು ನೀವು ಎಲ್ಲಿಂದ ತಂದಿರುತ್ತೀರಿ ಎಂದರೆ ನಾನು ನನನ ಸಂಬಂಧಿಕರ ಬಳಿಯಿಂದ ಸಾಲ ಮಾಡಿ ಮತ್ತು ನನ್ನಲ್ಲಿರುವ ಸ್ವಲ್ಪ ಹಣವನ್ನು ಜೋಡಿಸಿ ಆರೋಪಿಗೆ ನೀಡಿರುತ್ತೇನೆ. ನಿಮ್ಮ ಖಾಸಗಿ ದೂರಿನಲ್ಲಿ ನೀವು ಇನ್ನೊಬ್ಬ ಪಕ್ಷಗಾರರಿಂದ ಎಷ್ಟು ಹಣವನ್ನು ಪಡೆದುಕೊಂಡಿರುತ್ತೀರಿ ಎಂದು ಯಾವುದೇ ಮೊತ್ತವನ್ನು ನಮೂದು ಮಾಡಿಲ್ಲ ಎಂದರೆ ಸರಿ. ಖಾಸಗಿ ದೂರಿನಲ್ಲಿ 3 ನೇ ಪಕ್ಷಗಾರರು ಯಾರು ಎಂದು ನೀವು ಅವರ ಹೆಸರನ್ನು ನಮೂದು ಮಾಡಿಲ್ಲ ಎಂದರೆ ಸರಿ.

2. ನನಗೆ ಆರೋಪಿಯ ಪರಿಚಯ ಇರುತ್ತದೆ. ಆರೋಪಿಯು ಪೋಲಿಸ್ ಕೆಲಸ ಮಾಡುತ್ತಾರೆ. ಅವರು ಎಲ್ಲಿ ಪೋಲಿಸ್ ಕರ್ತವ್ಯ ವನ್ನು ನಿರ್ವಹಿಸುತ್ತಿದ್ದರು ಎಂದರೆ ಅವರ ಪರಿಚಯ ನನಗೆ ಅಂಕೋಲಾದಲ್ಲಿ ಆಗಿರುತ್ತದೆ . ನನಗೆ ಅಷ್ಟೇ ಗೊತ್ತು ಎಲ್ಲಿ ಕರ್ತವ್ಯ ನಿರ್ವಹಿಸುತ್ತಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿಯ ಮೂಲ ವಿಳಾಸ ಕಾರವಾರವಾಗಿರುತ್ತದೆ.ಆರೋಪಿಯು 2019 ಅಕ್ಟೋಬರ್ ತಿಂಗಳಿನಲ್ಲಿ ಮಗಳ ಮದುವೆ ಸಲುವಾಗಿ ಹಣ ಬೇಕು ಎಂದು ನನ್ನ ಬಳಿಯಲ್ಲಿ ಕೇಳಿರುತ್ತಾರೆ. ಆರೋಪಿಗೆ ಹಣವನ್ನು ನಗದಿನ ರೂಪದಲ್ಲಿ ಕೊಟ್ಟಿರುತ್ತೇನೆ. ಸದ್ರಿ ಸಾಲ ಕೊಟ್ಟ ಹಣಕ್ಕೆ ರೂ 2 ಲಕ್ಷ ಆರೋಪಿಯು 2 ಕರಾರು ಪತ್ರಗಳನ್ನು ನನಗೆ ಬರೆದುಕೊಟ್ಟಿರುತ್ತಾರೆ. ಸದ್ರಿ ಕರಾರು ಪತ್ರದ ಮೂಲ ಪ್ರತಿ ನನ್ನ ಬಳಿ ಇಲ್ಲ . ಅವರೆ ಬರೆದುಕೊಂಡು ಸಹಿ ಮಾಡಿ ಅವರೆ ತೆಗೆದುಕೊಂಡು ಹೋಗಿರುತ್ತಾರೆ.

**3.** 2 ಕರಾರು ಪತ್ರಗಳಲ್ಲಿ ಮೊದಲಿನ ಕರಾರು ಪತ್ರವನ್ನು ಆರೋಪಿಯು ಯಾವಾಗ ಬರೆದುಕೊಂಟ್ಟಿರುತ್ತಾರೆ ಎಂದರೆ ಅದು ದಿಃ 16-10-2019 ಆಗಿರುತ್ತದೆ. ಸ್ದ್ರಿ ಕರಾರು ಪತ್ರವನ್ನು ರಜಿಸ್ಟರ್ ಮಾಡಿಸಲು ತೊಂದರೆ ಇರಲಿಲ್ಲ . ಮೊದಲನೆ ಕರಾರು ಪತ್ರವನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿಲ್ಲ ಎಂದರೆ ಇಲ್ಲ . ಅದನ್ನು ಅವರೆ ತೆಗೆದುಕೊಂಡು ಹೋಗಿರುತ್ತಾರೆ. ಸ್ದ್ರಿ ಕರಾರು ಪತ್ರವಾಗುವ ಸಮಯದಲ್ಲಿ ನೀವು ಆರೋಪಿಯ ಕಡೆಯಿಂದ ಸಹಿಯಾದ ಖಾಲಿ ಚೆಕ್ ನ್ನು ಪಡೆದುಕೊಂಡಿರುತ್ತೀರಿ. ಆ ಕಾರಣದಿಂದ ಮೊದಲಿನ ಕರಾರು ಪತ್ರವನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಸ್ದ್ರಿ ಮೊದಲಾದ ಕರಾರು ಪತ್ರದ ಪ್ರತಿಯನಲ್ಲು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಒಪ್ಪಿಕೊಂಡಿದ್ದು ಅದರಲ್ಲಿರುವ ತನ್ನ ಸಹಿ ಸಹ ಒಪ್ಪಿಕೊಂಡಿರುವುದರಿಂದ ಸ್ದ್ರಿ ಕರಾರು ಪತ್ರವನ್ನು ನಿಡಿ-1 ಎಂದು , ಸಾಕ್ಷಿಯ ಸಹಿಯನ್ನು ನಿಡಿ-1 (ಎ) ಎಂದು ಗುರುತಿಸಲಾಯಿತು .

**4.** 2 ನೇ ಕರಾರು ಪತ್ರವನ್ನು ದಿಃ 01-09-2020 ರಂದು ಮಾಡಿಕೊಳ್ಳಲಾಗಿರುತ್ತದೆ. ಮೊದಲಿನ ಕರಾರು ಪತ್ರದ ಪ್ರಕಾರ ಆರೋಪಿಯು ರೂ 2 ಲಕ್ಷ ಹಣವನ್ನು 6 ತಿಂಗಳೊಳಗೆ ಮರು ಪಾವತಿಸಬೇಕು ಎಂದು ಇತ್ತು. ಈ ಹಣವನ್ನು ಆರೋಪಿಯು ಮರು ಪಾವತಿ ಮಾಡಿಲ್ಲ.

**5.** 2 ನೇ ಕರಾರಿನ ಪ್ರಕಾರ ಆರೋಪಿಯು ಎಷ್ಟು ಹಣವನ್ನು ಸಂದಾಯ ಮಾಡಿದ್ದರು ಮತ್ತು ಎಷ್ಟು ಹಣ ಕಟ್ಟಲು ಬಾಕಿ ಇರುತ್ತದೆ ಎಂದು ನಮೂದು ಮಾಡಿರುತ್ತೀರಾ ಎಂದರೆ ಇಲ್ಲ.ಈ 2 ಕರಾರು ಪತ್ರದ ಮೂಲ ಪ್ರತಿಯನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಲು ನಿಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.